ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
'ನ್ಯಾಯ ದೇಗುಲ', ಮೊದಲನೇ ಮಹಡಿ, ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು–560 027
KARNATAKA STATE LEGAL SERVICES AUTHORITY
'Nyaya Degula', 1st Floor, H. Siddaiah Road, Bengaluru–560 027.
Telephone : 080- 22111729, 22111714, Website : www.kslsa.kar.nic.in E-mail : mskar-slsa@hck.gov.in

ಸಂಖ್ಯೆ : ಕರಾಕಾಸೇಪ್ರಾ :
No. KSLSA : 03/ಎಡಿಎಂ/ಎಸ್‌ಓ/2026

ದಿನಾಂಕ: 08.05.2026

ಕಾರ್ಯಕಾರಿ ನಿರ್ದೇಶಕರು,
ಕರ್ನಾಟಕ ಪರೀಕ್ಷಾ ಪ್ರಾಧಿಕಾರ,
ಮಲ್ಲೇಶ್ವರಂ,
ಬೆಂಗಳೂರು.

ಮಾನ್ಯರೇ,

**ವಿಷಯ:** ಶಾಖಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಹೊರಡಿಸಿರುವ ಅಧಿಸೂಚನೆ ಹಾಗೂ ನೇಮಕಾತಿ ಪ್ರಕ್ರಿಯೆಯನ್ನು ಹಿಂಪಡೆಯುವ ಕುರಿತು.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/02/ಸೇಹಿಮ/2026, ಬೆಂಗಳೂರು, ದಿ.27.04.2026
2) ತಮ್ಮ ಕಛೇರಿಯ ಪತ್ರ ಸಂಖ್ಯೆ: ಇಡಿ/ಕೆಇಎ/ನೇಮಕಾತಿ/ಕೆಸ್‌ಎಲ್‌ಎಸ್‌ಎ/2025–26, ದಿನಾಂಕ:05.05.2026

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇಲ್ಲಿ ಖಾಲಿ ಇರುವ 19 ಶಾಖಾಧಿಕಾರಿ ಹುದ್ದೆಗಳ (ಪೋಷಕ ವೃಂದ–17 ಮತ್ತು ಕಲ್ಯಾಣ ಕರ್ನಾಟಕ–02) ನೇರ ನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿ ದಿನಾಂಕ:16.04.2026 ರಿಂದ 15.05.2026 ರವರೆಗೆ ಅಧಿಸೂಚಿಸಲಾಗಿತ್ತು.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಸೇಹಿಮ 2025, ದಿನಾಂಕ:03.09.2025ರನ್ವಯ ಪರಿಶಿಷ್ಟ ಜಾತಿಗೆ ಒಳಮೀಸಲಾತಿಯನ್ನು ಅಳವಡಿಸಿಕೊಂಡು ಚಾಲ್ತಿಯಲ್ಲಿರುವ ನೇಮಕಾತಿ ಪ್ರಕ್ರಿಯೆಗಳನ್ನು ಅಥವಾ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 01 ಸೇಹಿಮ 2026, ದಿನಾಂಕ:27.02.2026 ರಂತೆ ಒಳಮೀಸಲಾತಿ ಅಳವಡಿಸದೇ ಹೊರಡಿಸಿರುವ ಎಲ್ಲಾ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು ಮೇಲಿನಂತೆ ಒಳಮೀಸಲಾತಿ ಅಳವಡಿಸಿಕೊಂಡು ಪರಿಷ್ಕೃತ ಅಧಿಸೂಚನೆಗಳನ್ನು ಕೂಡಲೇ ಹೊರಡಿಸಿ, ನೇಮಕಾತಿಯನ್ನು ಮಾಡಬೇಕಾಗಿರುತ್ತದೆ.

..2

ಈ ಹಿನ್ನೆಲೆಯಲ್ಲಿ ಹಾಲಿ ಹೊರಡಿಸಿರುವ ಶಾಖಾಧಿಕಾರಿ ಹುದ್ದೆಗಳ ಅಧಿಸೂಚನೆಯನ್ನು ಈ ಕೂಡಲೇ ಹಿಂಪಡೆಯಲು ಮತ್ತು ಈ ಕುರಿತು ವೆಬ್‌ಸೈಟ್‌ನಲ್ಲಿ ಪ್ರಕಟಣೆ ಹೊರಡಿಸುವಂತೆ ಹಾಗೂ ಅರ್ಜಿ ಶುಲ್ಕವನ್ನು ಪಾವತಿಸದ ಅಭ್ಯರ್ಥಿಗಳಿಗೆ ಸದರಿ ಶುಲ್ಕದ ಮೊತ್ತವನ್ನು ಅವರವರ ಖಾತೆಗೆ ಹಿಂತಿರುಗಿಸುವಂತೆ ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

ತಮ್ಮ ವಿಶ್ವಾಸಿ,

08/05/2024

(ಹೆಚ್. ಶಶಿಧರ ಶೆಟ್ಟಿ)
ಸದಸ್ಯ ಕಾರ್ಯದರ್ಶಿ